ಶ್ರೀ ಎಸ್. ಶ್ರೀಕಾಂತ ಕುಲಕರ್ಣಿ (ಜಮಖಂಡಿ) (ಡಾ: ಬಗಲಿ ಸಾರ್ವಭೌಮ ಸಾತಗೌಡ ರವರ ಪರವಾಗಿ) : ಉತ್ತರವನ್ನು ಸನ್ಮಾನ್ಯ ಮಂತ್ರಿಗಳು ಒದಗಿಸಿದ್ದಾರೆ. ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕು ಹೆಚ್ಚು ಕಡಿಮೆ ಬರಪೀಡಿತ ತಾಲ್ಲೂಕು. ಈ ವರ್ಷ ವಿಶೇಷ ಬರ ಬಿದ್ದಿದ್ದರಿಂದ ಸಣ್ಣ ನೀರಾವರಿ ಇಲಾಖೆ ಕೈಗೊಂಡಂತಹ ನೀರಾವರಿ ಯೋಜನೆಗಳನ್ನು ಆದಷ್ಟು ಬೇಗ ಒಂದು ಸಮಯ ನಿಗದಿ ಮಾಡಿಕೊಂಡು ಅದನ್ನು ಮುಗಿಸಿ ಕೊಟ್ಟರೆ ಜನರಿಗೆ ಅನುಕೂಲವಾಗುತ್ತದೆ. ಆ ದೃಷ್ಟಿಯಿಂದ ಆ ಸಮಯ ನಿಗದಿಪಡಿಸುವ ಕೆಲಸವನ್ನು ಸನ್ಮಾನ್ಯ ಮಂತ್ರಿಗಳು ಮಾಡಬೇಕೆಂದು ಕೇಳಬಯಸುತ್ತೇನೆ.

ಶ್ರೀ ಗೋವಿಂದ ಎಂ ಕಾರಜೋಳ: ಸನ್ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಕೆಲಸಗಳು ಪ್ರಾರಂಭ ಮಾಡಿದ್ದೇವೆ. ಕೆಲಸಗಳನ್ನು ಅನುದಾನದ ಆಧಾರದ ಮೇಲೆ 3 ವರ್ಷಕ್ಕೆ ಮುಗಿಸುವ ಯೋಜನೆಯನ್ನು ಹಾಕಿಕೊಂಡಿರುತ್ತೇವೆ. ಏನು ನಿಗದಿತ ಅವಧಿಯಲ್ಲಿ ಆಗಬೇಕೆನ್ನುತ್ತಾರೆ ಅದನ್ನು ಮುಂದಿನ ವರ್ಷದಲ್ಲಿ ಮುಗಿಸಲು ಸರ್ಕಾರ ಪ್ರಯತ್ನ ಮಾಡುತ್ತದೆ.

LMP ಲೋಹದ ಮುಲ್ಲಾಮಾರಿ ಯೋಜನೆ

75 (851) ಶ್ರೀ ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ) ಮಾನ್ಯ ಜಲಸಂಪನ್ಮೂಲ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) LMP (ಲೋಹದ ಮುಲ್ಲಾ ಮಾರಿ ಯೋಜನೆ) ಕಿ.ಮೀ. 40 ರಿಂದ 80ರವರೆಗಿನ ಕೆಲಸ (ಕೆನಲ್) ಅಪೂರ್ಣಗೊಂಡಿದ್ದು ರೈತರಿಗೆ ತೊಂದರೆಯಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಸರ್ಕಾರ ಕೈಗೊಳ್ಳುತ್ತಿರುವ ಕ್ರಮವೇನು;

(ಇ) LMP (ಲೋಹದ ಮುಲ್ಲಾ ಮಾರಿ) ಎಲ್ಲಾ ಹಂಚಿಕೆ ಅಪೂರ್ಣಗೊಂಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

(ಈ) ಹಾಗಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)

(ಅ) ಕೆಳದಂಡೆ (ಲೋಯರ್) ಮುಲ್ಲಾಮಾರಿ ಯೋಜನೆಯಡಿ ಒಂದು ಮುಖ್ಯ ಕಾಲುವೆಯ (ಬಲದಂಡೆ ಕಾಲುವೆ) ಬರುತ್ತಿದ್ದು, ಅದು 80.00 ಕಿಮೀ.ಉದ್ದವಿದೆ. ಅದರಲ್ಲಿನ

ಕಿಮೀ. 40.00 ರಿಂದ 80.00 ಕಿಮೀ.ವರೆಗಿನ ಕಾಲುವೆ ಕೆಲಸಗಳು ಪೂರ್ಣಗೊಂಡಿದ್ದು, ಅವುಗಳ ಪುನಶ್ಚೇತನ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

(ಆ) ಕೆಳದಂಡೆ ಮುಲ್ಲಾಮಾರಿ ಯೋಜನೆಯ ಬಲದಂಡೆ ಕಾಲುವೆಯ ಮುಖ್ಯ ಕಾಲುವೆ ಕೆಲಸಗಳು ಪೂರ್ಣಗೊಂಡಿದ್ದು, ಪ್ರಾಯೋಗಿಕವಾಗಿ ಕಾಲುವೆಯಲ್ಲಿ ನೀರು ಹರಿಸಲಾಗಿ, ಅಲ್ಲಲ್ಲಿ ಸೋರಿಕೆ ಕಂಡು ಬಂದಿದ್ದು, ಸೋರಿಕೆ ಕಂಡು ಬಂದ ರೀಚ್‌ಗಳಲ್ಲಿ ಪುನಶ್ಚೇತನ ಕಾಮಗಾರಿಗಳನ್ನು ಗುರುತಿಸಿ ಎಂಟು ಪ್ಯಾಕೆಜ್‌ಗಳಲ್ಲಿ ಈ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, 0.00 ರಿಂದ 40.00 ಕಿಮೀ.ವರೆಗಿನ ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ 40.00 ರಿಂದ 80.00 ಕಿಮೀ.ವರೆಗಿನ ಪುನಶ್ಚೇತನ ಕಾಮಗಾರಿಗಳು ಪ್ರಗತಿಯಲ್ಲಿವೆ.

(ಇ) ಕೆಳದಂಡೆ ಮುಲ್ಲಾಮಾರಿ ಯೋಜನೆಯ ಬಲದಂಡೆ ಕಾಲುವೆಯ ಅಡಿಯಲ್ಲಿ 66 (ಹಂಚಿಕೆ) ವಿತರಣಾ ಕಾಲುವೆಗಳಿಗೆ, ಅವುಗಳಲ್ಲಿ 65 ಕಾಲುವೆಗಳ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಉಳಿದ ಒಂದು ಹಂಚಿಕೆ (ವಿತರಣಾ ಕಾಲುವೆ ಸಂ.34), ಅದರಲ್ಲಿನ ಲ್ಯಾಟರಲ್‌ಗಳ ಮತ್ತು FIC ಗಳು ಭೂಸ್ವಾಧೀನ ಪ್ರಕ್ರಿಯೆಯಿಂದ ವಿಳಂಬವಾಗಿದ್ದು, ಕೆಲಸಗಳನ್ನು ಕೈಗೆತ್ತಕೊಳ್ಳಲಾಗಿದೆ.

(ಈ) ಕೆಳದಂಡೆ ಮುಲ್ಲಾಮಾರಿ ಯೋಜನೆಯ ಅಡಿಯಲ್ಲಿ ನೀರಿನ (ಹಂಚಿಕೆ) ಕಾಮಗಾರಿಗಳು (ಒಟ್ಟು 66 ಉಪ ಕಾಲುವೆಗಳು / ಡಿಸ್ಟ್ರಿಬ್ಯೂಟರಿಗಳು) ಇದ್ದು, ಅವುಗಳಲ್ಲಿ 65 ಉಪ ಕಾಲುವೆಗಳ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಬಾಕಿ ಉಳಿದ ಒಂದು ಉಪ ಕಾಲುವೆ ಕಾಮಗಾರಿಗಳು ಭೂಸ್ವಾಧೀನ ಪ್ರಕ್ರಿಯೆಯ ವಿಳಂಬದಿಂದ ಕುಂಠಿತಗೊಂಡಿದೆ. ಭೂ ಮಾಲೀಕರು ನ್ಯಾಯಾಲಯದಲ್ಲಿ ಖಟ್ಲೆ ಹೂಡಿರುತ್ತಾರೆ. ನ್ಯಾಯಾಲಯದ ಆದೇಶವನ್ನು ಅನುಸರಿಸಿ ಈ ಉಪಕಾಲುವೆಯ ಕಾಮಗಾರಿಗಳನ್ನು ಶೀಘ್ರದಲ್ಲಿಯೇ ಪೂರ್ಣಗೊಳಿಸಲು ನಿಯೋಜಿಸಲಾಗಿದೆ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಲೋಯರ್ ಮುಲ್ಲಾಮಾರಿ ಯೋಜನೆಯು ಸುಮಾರು 20–25 ವರ್ಷಗಳಿಂದ ನಡೆದುಕೊಂಡು ಬಂದಿದೆ. ಈ ಪ್ರಾಜೆಕ್ಟ್ ಒಂದೆರಡು ಕೋಟಿ ರೂಪಾಯಿಗಳಿಂದ ಪ್ರಾರಂಭವಾಗಿ ಸುಮಾರು 250 ಕೋಟಿ ರೂಪಾಯಿ ಖರ್ಚಾಗಿದೆ. ಆದರೆ ಸಮರ್ಪಕವಾಗಿ ರೈತರಿಗೆ ನೀರು ಕೊಟ್ಟಿಲ್ಲ. ಗುಲ್ಬರ್ಗಾದ ನನ್ನ ಮತ ಕ್ಷೇತ್ರದಲ್ಲಿ

ನಡೆದ ಒಂದು ಸಭೆಯಲ್ಲಿ ಪ್ರಸ್ತಾಪ ಆಗಿದೆ. ಜೀರೋ ಟು 40 ಕಿ.ಮೀ. ವರೆಗಿನ ಕಾಲುವೆ ಕೆಲಸಗಳಲ್ಲಿ ಕೆಲವೇ ಕೆಲವು ಸರಿಯಾಗಿವೆ. ಆದರೆ 40ರಿಂದ 80 ಕಿಮೀ ವರಗೆ ಪ್ರಗತಿ ಆಗಿದೆ ಎಂದರೂ ಸಹ ಸಂಪೂರ್ಣವಾಗಿ ಸರಿಯಾಗಿಲ್ಲ. ಆದರೆ ಮಾನ್ಯ ಸಚಿವರು ಏನು ಉತ್ತರ ಕೊಟ್ಟಿದ್ದಾರೆ ಎಂದರೆ ಕೆಲಸ ಪ್ರಗತಿ ಆಗಿದೆ ಎಂದು ಹೇಳಿದ್ದಾರೆ. Selected regions ನಲ್ಲಿ ಸಂಪೂರ್ಣವಾಗಿ 40 ರಿಂದ 80 ಕಿ.ಮೀ. ಮಾಡಬೇಕಾದಾಗ re - structure ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇನ್ನೊಂದು ಉತ್ತರದಲ್ಲಿ 4 ಉಪ ಕಾಲುವೆಗಳ ಕೆಲಸ ಎಲ್ಲಾ ಸರಿಯಾಗಿದೆ, ಪ್ರಗತಿ ಆಗಿದೆ ಎಂದು ತಿಳಿಸಿದ್ದಾರೆ. ಬಹುಶಃ ಅಧಿಕಾರಿಗಳು ಸರಿಯಾಗಿ ಮಾಹಿತಿ ಕೊಟ್ಟಿಲ್ಲ ಎಂದು ಕಾಣುತ್ತದೆ. ಏಕೆಂದರೆ 64 ಕಾಲುವೆಗಳಲ್ಲಿ ಒಂದೊಂದು ಉಪಕಾಲುವೆ ಒಂದು ಒಂದೂವರೆ ಕಿ.ಮೀ ದೂರ ಇದೆ. ಆದರೆ 800 ಮೀಟರ್ಸ್‌ಗೆ ಮಾತ್ರ rectification ಇದೆ. ಮುಂದೆ ಹೆಚ್ಚು ನೀರು ಹೋಗದೇ ಜನರಿಗೆ ಅನಾನುಕೂಲ ಆಗಿದೆ, ನೀರು ಸಿಕ್ಕಿಲ್ಲ. I want categorical assurance from the Hon'ble Minister on the floor of the House. Entire 40-80 k.m. ಕಾಮಗಾರಿ ಕೆಲಸವನ್ನು complete restructure ಮಾಡಿ ಎಲ್ಲಾ ಉಪ ಕಾಲುವೆಗಳನ್ನೂ ನೀವು restructure ಮಾಡಿ ಕೆಲವು ಕಾಲಮಿತಿಯೊಳಗೆ FIC ಮಾಡಿ ನಮ್ಮ ಭಾಗದ ರೈತರಿಗೆ ಅನುಕೂಲ ಮಾಡಿಕೊಡಬೇಕು. ಈ ಕ್ಷೇತ್ರಗಳು ಹೊಸದಾಗಿ ನನ್ನ ಮತ ಕ್ಷೇತ್ರಕ್ಕೆ ಬಂದಿವೆ. ಮೊದಲು ಇವು ನನ್ನ ಮತ ಕ್ಷೇತ್ರದಲ್ಲಿರಲಿಲ್ಲ. 25 ವರ್ಷಗಳಿಂದ ಆಗಿರತಕ್ಕಂತಹ ಅನ್ಯಾಯವನ್ನು ಆರು ತಿಂಗಳಲ್ಲಿ ಮಾಡಿಕೊಡಲು ನನಗೆ categorical assurance on the floor of the House.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ ಬಹಳ ವರ್ಷಗಳಿಂದ ಇದು ಕುಂಠಿತವಾಗಿ ನಡೆದಿದೆ. ಸುಮಾರು 1972–73ರಲ್ಲಿ ಪ್ರಾರಂಭ ಆಗಿರತಕ್ಕಂತದ್ದು. ಕಾಲುವೆಗಳನ್ನು ಮುಂಚೆಯೇ ತೆಗೆದು ಸುಮಾರು 10–20 ವರ್ಷ ಆಗಿರುವ ಹಿನ್ನೆಲೆಯಲ್ಲಿ ಅವುಗಳ ಸ್ಥಿತಿಗತಿ ಉತ್ತಮವಾಗಿರಲಿಲ್ಲ. ಆದರೆ ನಾನು ಬಂದ ಮೇಲೆ ಅವುಗಳ ಪುನಶ್ಚೇತನ ಮಾಡಬೇಕೆಂದು ಜೀರೋದಿಂದ 40 ಕಿ.ಮೀ ವರೆಗೆ ಕೆಲವು ಆಯ್ದ ಭಾಗಗಳನ್ನು ಮಾಡಿ ಈಗಾಗಲೇ 49.00 ಕಿ.ಮೀ. ವರೆಗಿನ ಕಾಮಗಾರಿಗಳು ಪೂರ್ಣಗೊಂಡಿವೆ, 40ರಿಂದ 60 ಕಿ.ಮೀ ವರೆಗೆ ಸ್ವಲ್ಪ ಭಾಗ ಉಳಿದಿದೆ. 60 ರಿಂದ 80 ಕಿ.ಮೀ. 70 ರಿಂದ 80 ಬಹುತೇಕವಾಗಿ ಸರಿಯಾಗಿಲ್ಲ. ಈ ಹಿನ್ನೆಲೆಯಲ್ಲಿ

DRM proposal ಅನ್ನು Government of India ಗೆ ಕಳುಹಿಸಿದ್ದೇವೆ. ಅವರು ಈ ಯೋಜನೆ ಪೂರ್ತಿ ಮಾಡಿ declare ಮಾಡಿ ಅದನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದರು. ಒಟ್ಟಾರೆಯಾಗಿ ಮಾನ್ಯ ಸದಸ್ಯರಿಗೆ ನಾನು categorical ಆಗಿ ಹೇಳುವುದಕ್ಕೆ ಇಚ್ಛಿಸುತ್ತೇನೆ. 40 ರಿಂದ 80 ಕಿ.ಮೀ ಮತ್ತು ಅದರಲ್ಲಿ ಬರುವ distributoryಗಳು ಅದರಲ್ಲಿ ಏನೇನು ಕೆಲಸಗಳು ಆಗಬೇಕು, ಈಗ ಏನೇನು ತೆಗೆದುಕೊಂಡಿದ್ದೇವೆ ಅದಕ್ಕೆ additional ಆಗಿ ತೆಗೆದುಕೊಳ್ಳುತ್ತಿದ್ದೇವೆ. ಅದನ್ನು ತೆಗೆದುಕೊಂಡು ಸಮರ್ಪಕವಾಗಿ ಕೆಲಸ ಆದ ಮೇಲೆ ಉಳಿದ ಭಾಗಗಳಲ್ಲಿ ಎಲ್ಲೆಲ್ಲಿ ತೆಗೆದುಕೊಳ್ಳಬೇಕು ಎಂಬ ಬಗ್ಗೆ Engineers ನಾವು ನೀವು ಎಲ್ಲರೂ ಒಟ್ಟಾಗಿ ಹೋಗಿ ಎಲ್ಲಿ ಯಾವ ಕೆಲಸ ತೆಗೆದುಕೊಳ್ಳಬೇಕೋ ಅದನ್ನು ಇದೇ ವರ್ಷ ತೆಗೆದುಕೊಂಡು ಆ ಯೋಜನೆಯನ್ನು ಪೂರ್ಣ ಮಾಡುತ್ತೇವೆ.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ:– ನನ್ನ ಪ್ರಶ್ನೆಗೆ ಅವಕಾಶ ಕೊಡಿ.

ಅಧ್ಯಕ್ಷರು:– ನಾನು ಕರೆದಾಗ ನೀವು ಇರಲಿಲ್ಲ.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ:– ಸಾರ್ ನಾನು ಬೀದರ್‌ನಿಂದ ಬರಬೇಕು. Flight delay ಆದ ಕಾರಣ ಈಗ ಬಂದಿದ್ದೇನೆ.

ಅಧ್ಯಕ್ಷರು:– ಆಮೇಲೆ ಅವಕಾಶ ಕೊಡುತ್ತೇನೆ.

ಕಾಮಗಾರಿಗಳ ಪ್ರಗತಿ

67 (575) ಶ್ರೀ ಬಿ. ಬಿ. ರಾಮಸ್ವಾಮಿಗೌಡ: ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:–

ಅ) 2009–10ನೇ ಸಾಲಿನಿಂದ ಈವರೆಗೆ ಸಣ್ಣ ನೀರಾವರಿ ಇಲಾಖೆಯು ಕುಣಿಗಲ್ ತಾಲ್ಲೂಕಿನಲ್ಲಿ ಮಾಡಿರುವ ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳು ಯಾವುವು;

ಆ) ಹಾಗಿದ್ದಲ್ಲಿ, ಕಾಮಗಾರಿಗಳ ಸಲುವಾಗಿ ಪಾವತಿಸಿರುವ ಮತ್ತು ಪಾವತಿಗೆ ಬಾಕಿ ಇರುವ ಮೊಬಲಗು ಎಷ್ಟು (ಗುತ್ತಿಗೆದಾರರು ಮತ್ತು ಕಾಮಗಾರಿಗಳ ವಿವರಗಳನ್ನು ಮತ್ತು ಹಣ ಪಾವತಿ ಸಂಬಂಧ ಇರುವ ದಾಖಲೆಗಳ ಪುಸ್ತಕಗಳ ನಕಲುಗಳನ್ನೊದಗಿಸುವುದು);

ಇ) ಹಾಗಿದ್ದಲ್ಲಿ, ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿದ್ದು, ಕಾಮಗಾರಿಗಳನ್ನು ಮಾಡದೇ ಬಿಲ್ಲುಗಳನ್ನು ಮಾಡಿಕೊಂಡು ಅವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ಥಳೀಯ